ತಾರೀಖು 15ನೇ ಸೆಪ್ಟೆಂಬರ್ 1889.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವದೇನಂದರೆ, ರೇಲ್ವೆ ಕಂಟ್ರಾಕ್ಟುದಾರ್ ಕೈಕೋಬಾದ ಸಾಹೆಬರ ಕಡೆ ಉಮ್ಮಣ್ಣನೆಂಬುವನು ಚನ್ನಗಿರಿ ಡಿಪೋದಲ್ಲಿ 1 ಸಾಗವಾನಿ ಬೆಲಗನ್ನು ಕೊಂಡು ಕೊಂಡು 1 ವರುಷವೂ 9 ತಿಂಗಳಾದಾಗ್ಯೂ ರಫ್ತು ಮಾಡದೇ ಇರುವದ್ದರಿಂದ ಸದರೀ ಉಮ್ಮಣ್ಣನೆಂಬುವವನೇ ಆಗಲಿ ಅವನ ಕಡೆಯವರೇ ಆಗಲಿ ತಮ್ಮ ಹಕ್ಕನ್ನು ಸ್ಥಿರಪಡಿಸಿ ಸರಕಾರಕ್ಕೆ ಸಲ್ಲತಕ್ಕ ಬಾಡಿಗೆ ಮುಂತಾ ಯಿಂದ ಸದರೀ ಬೆಲಗವನ್ನು ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ರಫ್ತು ಮಾಡಿಕೊಳ್ಳಬೇಕು, ಇದಕ್ಕೆ ತಪ್ಪಿದರೆ ಸದರೀ ಬೆಲಗು ಹರಾಜು ಮಾಡಲ್ಪಡುತ್ತದೆ.

ಇ. ಪಿ. ಲೌರಿ,
ಅಸಿಸ್ಟೆಂಟ್ ಕಲೆಕ್ಟರ್.

ಚಿತ್ರದುರ್ಗ ಡಿವಿಜ್ಞ.

ಪ್ರಕಟನೆ.

ತಾರೀಖು 15ನೇ ಸೆಪ್ಟೆಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ಯ 1889ನೇ ಇಸವಿ ಅಕ್ಟೋಬರ್ ಮಾಹೆ 15ನೇ ತಾರೀಖುವರೆಗೆ ಚಿತ್ರದುರ್ಗ ಡಿವಿಜ್ಞ ಯಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಮೊಹರಾದ ಟೆಂಡರುಗಳು ತೆಗದು ಕೊಳ್ಳಲ್ಪಡುತ್ತೆ. ಅಂದಾಜುದಲ್ಲಿ ಕಂಡ ಬಾಬುವಾರು ಮೊತ್ತಗಳನ್ನ ಇದರಡಿ ನಮೂದಿಸಿಫೆ ಆದರೆ ಈ ಮೊತ್ತವು ಗೊತ್ತಾದ್ದಲ್ಲವು. 1891ನೇ ಮಾರ್ಚಿ ಮಾಹೆ 31ನೇ ತಾರೀಖು ವಳಗಾಗಿ ಕೆಲಸ ಪೂರೈಸಬೇಕು.

2. ದಿವಿ 11 ಘೆಂಟೆ ಲಾಗಾಯತು 5 ಘೆಂಟೆವರಿವಿಗೂ ಚಿತ್ರದುರ್ಗ ಡಿವಿಜ್ಞ ಯಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಇರುವ ನಖಾಸೆಗಳು ಮತ್ತು ತಪಸೀಲ್‌ವಾರ್ ಅಂದಾಜು ಪರತ್ತುಗಳನ್ನು ನೋಡಬಹುದು.

3. ಇದಕ್ಕಾಗಿ ಘಾಪಿಸಿರುವ ಫಾರಂಗಳಲ್ಲಿ ಟೆಂಡರುಗಳನ್ನ ಬರೆದು ಕಳುಹಿಸಬೇಕು, ಅಂಥಾ ಫಾರಂಗಳು ಯಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ದೊರೆಯುತ್ತವೆ. ಇದರಡಿ ನಮೂದಿಸಿರುವಂತೆ ವಂದು ತಕ್ತೆ ತಯಾರ್ಮಾಡಿ ಆಯಾ ಬಾಬಿಗೆ ಯಾವ ದರದಂತೆ ಕೆಲಸ ನಡಿಸಲು ಇಷ್ಟವಿದಿಯೋ ಅವನ್ನ ನಮೂದಿಸಿ ಟೆಂಡರು ವಹನೇ ರವಾನಿಸತಕ್ಕದ್ದು.

ಕೆಲಸಗಳ ವಿವರ.		ಮೊತ್ತ.	ದರ.
ಪೀರಿಗೆ			
ಮಟ್ಟೀಕಾವುಗಾರಿ	ನಲಗಜ	92102	
ಹಳ್ಳಕ್ಕೆ ಭರ್ತಿ	..	23478	
ಹೊಸಕಲ್ಲು ಕೆಲಸ	..	5002	
ಹೂಳುತೆಗೆಯುವದು ನೀರು ಹೊಡೆಯುವದು ವಗೈರೆ		ಮೊತ್ತ	
ಗ್ರೇಡಿಕಲ್ಲುಗಳು	ವಂದಕ್ಕೆ	22	
ರ್ಬಿಟ್‌ವರ್ಕ್ ಕಲ್ಲುಗಳು	..	2	
ತಲಾವುಕಲ್ಲು	..	1	
ನೀರು ಮುಟ್ಟು ತೋರಿಸುವ ಕಲ್ಲು ತೂಬು	..	1	
ಸುರತೆಗಚ್ಚೆ	ಸಲಆಡಿ	4762	
ಕಲ್ಲುಸುಂಣ	..	592	
ಚಪ್ಪಡಿಕಲ್ಲು	ಚದರಡಿ	1093	
ಗಚ್ಚಿಕವರ್ಮಾ ಕೆಲಸ	ಸಲಅಡಿ	236	
ಗಿಲಾಪ್	ಚದರ	1430	
ಕೊಂತ್ತ ಸರಪಣಿ ಸಮೇತ	ವಂದಕ್ಕೆ	4	
ಬಿಡಗಂಡಿಪಲಿಗೆ	..	2	
ತೂಬಿನ ಅಡ್ಡ ಕಲ್ಲುಗಳಲ್ಲಿ ಸಂಗತ್ಯಾಸ್ ವಗೈರೆ		8	
ದಾವಾಗೆ ಕಬ್ಬಿಣದ ಹಲಿಗೆಗಳು		ಮೊತ್ತ	
ಕೊರೀಡಿ		ಮೊತ್ತ	
ನೀರಾವರೀ ಕಾಲ್ವೆತಗೆಯುವದು		ಮೊತ್ತ	